**CC 1799/2021**
**CW-6/PW-6**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ.**

ಸಿಸಿ 1799/2021

| | |
|---|---|
| **ಸಾಕ್ಷಿದಾರನ ಹೆಸರು** | ಎಸ್. ಶ್ಯಾಮ್ |
| **ತಂದೆ/ಗಂಡ/ತಾಯಿ ಹೆಸರು** | ಶಂಕರ ನಾಯಕ |
| **ವಯಸ್ಸು** | **59** ವರ್ಷ |
| **ಉದ್ಯೋಗ** | ಡಿಪ್ಯುಟಿ ಡೈರೆಕ್ಟರ, ಅಗ್ರಿಕಲ್ಚರ್ ಮಾರ್ಕೆಟಿಂಗ್ ಬಳ್ಳಾರಿ |
| **ವಾಸಸ್ಥಳ** | ಬಳ್ಳಾರಿ |
| **ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು** | **ದಿನಾಂಕಃ 27-07-2023** |

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

2021 ರಲ್ಲಿ ನಾನು ಸಹಾಯಕ ನಿರ್ದೇಶಕರು ಕೃಷಿ ಮಾರುಕಟ್ಟೆ ಕೊಪ್ಪಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ಹೆಚ್ಚುವರಿಯಾಗಿ ಆಹಾರ ಮತ್ತು ನಾಗರೀಕ ಇಲಾಖೆಯಲ್ಲಿ ಪ್ರಭಾರ ಉಪ ನಿರ್ದೇಶಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ.

2. ನಮ್ಮ ಇಲಾಖೆಯ ಸಿಬ್ಬಂದಿ ಅಕ್ಕಿಯನ್ನು ಜಪ್ತು ಮಾಡಿಕೊಂಡು ಸದರಿ ಅಕ್ಕಿ ಪಡಿತರ ವಿತರಣಾ ಅಕ್ಕಿ ಇದೆಯೋ ಅಥವಾ ಇಲ್ಲವೋ ಎಂದು ಪರಿಶೀಲನೆ ಮಾಡಲು ನನ್ನ ಬಳಿ ಮಾದರಿಯನ್ನು ತೆಗೆದುಕೊಂಡು ಬಂದಿರುತ್ತಾರೆ. ಸದರಿ ಮಾದರಿ ಅಕ್ಕಿಯನ್ನು ನಾನು ಪರಿಶೀಲನೆ ಮಾಡಿ ಸದರಿ ಅಕ್ಕಿ ಪಡಿತರ ವಿತರಣಾ ಅಕ್ಕಿ ಇರುತ್ತದೆ ಎಂದು ಆಹಾರ ನಿರೀಕ್ಷಕರು, ಆಹಾರ ಶಿರಸ್ತೇದಾರ ಮತ್ತು ನಾನು ದೃಢೀಕರಣ ಪತ್ರವನ್ನು ದಿನಾಂಕಃ 13-07-2021 ನೀಡಿರುತ್ತೇನೆ. ಸಾಕ್ಷಿಗೆ ಮು.ಮಾ-1 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ನಿಪಿ-6 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು

ನಿಪಿ-6(ಸಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎ.ಡಿ.ಹೆಚ್. ಆರೋಪಿ ಪರ ವಕೀಲರಿಂದಃ</u>

4. 2021 ರಲ್ಲಿ ನಾನು ಪ್ರಭಾರ ಆಹಾರ ಉಪ ನಿರ್ದೇಶಕ ಎಂದು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಮುದ್ದೆ ಮಾಲನ್ನು ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಪೊಲೀಸರು ಲಿಖಿತವಾಗಿ ಯಾವುದೇ ಮನವಿಯನ್ನು ನನಗೆ ಸಲ್ಲಿಸಿರುವುದಿಲ್ಲ. ನಿಪಿ-6 ರಲ್ಲಿ ಅಕ್ಕಿಯನ್ನು ಯಾವ ವಿಧಾನದಲ್ಲಿ ಪರಿಶೀಲನೆ ಮಾಡಿ ಅದನ್ನು ನೀಡಿರುತ್ತೇನೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣ 2020 ರಲ್ಲಿ ಆಗಿರುತ್ತದೆ. ಚಾಸಾ-1 ರವರು ಪಂಚನಾಮೆಯಲ್ಲಿ ಮುದ್ದೆ ಮಾಲಿನ ಮಾದರಿಯನ್ನು ಪಡೆದುಕೊಂಡಿರುವ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಆದ್ದರಿಂದ ನಾನು ಮು.ಮಾ-1 ನ್ನು ಪರಿಶೀಲನೆ ಮಾಡಿ ದೃಢೀಕರಣ ಪತ್ರ ನೀಡುವ ಪ್ರಮೇಯ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 23-10-2020 ರಂದು ಚಾಸಾ-1 ರವರು ಜಪ್ತ ಮಾಡಿರುವ ಅಕ್ಕಿಯನ್ನು ನಮ್ಮ ಕೆ.ಎಸ್.ಎಫ್.ಸಿ.ಎಸ್. ಗೋದಾಮಿನಲ್ಲಿ ನೀಡಿ ಸ್ವೀಕೃತಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ದಿನದಂದು ಎಲ್ಲ ಅಕ್ಕಿಯನ್ನು ಗೋದಾಮಿನಲ್ಲಿ ನೀಡಿದ್ದರಿಂದ ಮುದ್ದೆ ಮಾಲು-1 ನ್ನು ಪರಿಶೀಲನೆ ಮಾಡಲು ನನ್ನ ಬಳಿ ತಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ಕ್ಕೆ ಚಾಸಾ-1, ಆಹಾರ ಶಿರಸ್ತೇದಾರರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಫಿರ್ಯಾದಿಯನ್ನು ಚಾಸಾ-1 ರವರು ಸಲ್ಲಿಸಿರುತ್ತಾರೆ ಎಂದರೆ ಸರಿ. ಚಾಸಾ-1 ಮತ್ತು ಆಹಾರ ಶಿರಸ್ತೇದಾರರು ಅಕ್ಕಿಯನ್ನು ಪರಿಶೀಲನೆ ಮಾಡುವ ಯಾವುದೇ ಪರಿಣಿತರು ಇರುವುದಿಲ್ಲ ಎಂದರೆ ಸರಿ. ಚಾಸಾ-1 ಮತ್ತು ಆಹಾರ

ಶಿರಸ್ತೇದಾರರು ಗಂಗಾವತಿಯ ಆಹಾರ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದರೆ ಸರಿ. ನಾನು ಕೊಪ್ಪಳದಲ್ಲಿ ಕರ್ತವ್ಯ ನಿರ್ವಹಿಸುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಪ್ರಭಾರ ಉಪ ನಿರ್ದೇಶಕರು ಆಹಾರ ಇಲಾಖೆ ಕೊಪ್ಪಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ನಿಪಿ-6 ನ್ನು ನಾನು, ಚಾಸಾ-1 ಮತ್ತು ಆಹಾರ ಶಿರಸ್ತೇದಾರರು 3 ಜನ ಪರಿಶೀಲನೆ ಮಾಡಿ ಅದನ್ನು ದೃಢೀಕರಣ ಮಾಡಿ ನೀಡಿರುತ್ತೇವೆ. ಚಾಸಾ-1 ರವರು ಫಿರ್ಯಾದಿದಾರರು ಇರುವುದರಿಂದ ನಿಪಿ-6 ಚಾಸಾ-1 ಮತ್ತು ಅವರ ಕೆಳಹಂತದ ಆಹಾರ ಶಿರಸ್ತೇದಾರರು ದೃಢೀಕರಣ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ದೃಢೀಕರಣ ಪತ್ರ ನೀಡಲು ನನಗೆ ಹೇಳಿರುತ್ತಾರೆ. ಪೊಲೀಸರು ನನಗೆ ದೃಢೀಕರಣ ಪತ್ರ ಕೇಳಿದಾಗ ನಾನು ಚಾಸಾ-1 ಮತ್ತು ಆಹಾರ ಶಿರಸ್ತೇದಾರರ ಸಹಿಯನ್ನು ನಿಪಿ-6 ರಲ್ಲಿ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಘಟನೆ 2020 ರಲ್ಲಿ ಆಗಿದ್ದು, ನಾನು ಸದರಿ ಇಲಾಖೆಯ ಪ್ರಭಾರವನ್ನು 2021 ರಲ್ಲಿ ವಹಿಸಿಕೊಂಡಿದ್ದರಿಂದ ನಾನು ಚಾಸಾ-1 ಮತ್ತು ಆಹಾರ ಶಿರಸ್ತೇದಾರರ ಸಹಿಯನ್ನು ನಿಪಿ-6 ಕ್ಕೆ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-6 ನ್ನು ದೃಢೀಕರಣ ಮಾಡಿ ಕೊಡುವಾಗ ಯಾವ ಅಧಿಸೂಚನೆ ಅಡಿಯಲ್ಲಿ ಜಪ್ತು ಮಾಡಿರುವ ಅಕ್ಕಿ ಪಿ.ಡಿ.ಎಸ್. ಅಕ್ಕಿ ಎಂದು ನೀಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಸಾಕಷ್ಟು ಸರ್ಕಾರದ ಅಧಿಸೂಚನೆಗಳು ಇರುತ್ತವೆ ಹಾಗೂ ನಾವು ಎಫ್.ಎಸ್.ಎಲ್.ಗೆ ಹೋಗಿ ಸದರಿ ಅಕ್ಕಿಯನ್ನು ಪರಿಶೀಲನೆ ಮಾಡಿಕೊಂಡು ಬಂದು ನಿಪಿ-6 ನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಅಕ್ಕಿಯನ್ನು ಎಫ್.ಎಸ್.ಎಲ್.ಗೆ ತೆಗೆದುಕೊಂಡು ಹೋಗಿ ಪರಿಶೀಲನೆ ಮಾಡಿರುವ ಬಗ್ಗೆ ವರದಿಯನ್ನು ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ

ಸಾಕ್ಷಿಯು ನಾನು ಮೌಖಿಕವಾಗಿ ಅಕ್ಕಿಯನ್ನು ಪರಿಶೀಲನೆ ಮಾಡಿ ಎಂದು ಕೇಳಿಕೊಂಡಿದ್ದರಿಂದ ನಮಗೆ ವರದಿಯನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಅಕ್ಕಿಯನ್ನು ಎಫ್.ಎಸ್.ಎಲ್. ಪರಿಶೀಲನೆ ಮಾಡಲು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಮಾತನ್ನು ಕೇಳಿಕೊಂಡು ನಿಪಿ-6 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕಃ 27-07-2023 ರಂದು ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಪ್ರ ದ ನ್ಯಾ ದಂ ಗಳು,**
**ಗಂಗಾವತಿ.**